ರೈತರು ಮರಾಠದೇಶದ ಕಡೆಗೆ ಯಾಕೆ ಹೋಗುತ್ತಿರಬಹುದು? ವಿಚಾರಿಸಿ' ಎಂದಾಗ ಅವರು 'ರಾಜರೇ, ಅದನ್ನೂ ವಿಚಾರಿಸುತ್ತೇವೆ' ಎಂದು ಮತ್ತೆ ಹೊರಟರು. ಕೆಲಸಮಯದ ನಂತರ ತುಂಬಾ ಸುಸ್ತಾಗಿ ಬಂದು 'ಮಹಾರಾಜ, ಅವರು ಅಕ್ಕಿಯನ್ನು ಆ ದೇಶಕ್ಕೆ ಮಾರಾಟ ಮಾಡಲು ಹೋಗುತ್ತಿದ್ದಾರೆ' ಎಂದು ಹೇಳಿದಾಗ ಕೃಷ್ಣದೇವರಾಯರು ಸುಮ್ಮನಾದರು. ಆದರೆ ಅಲ್ಲಿಂದ ತೆರಳಿದ್ದ ತೆನಾಲಿರಾಮ ತಿರುಗಿ ಬರಲಿಲ್ಲ. ಇದರಿಂದ ಕೆರಳಿದ ಅಷ್ಟದಿಗ್ಗಜರು 'ನೋಡಿದ್ರಾ ರಾಜರೇ, ನಾವು ನಿಮ್ಮ ಆಜ್ಞೆಯನ್ನು ಸರಿಯಾಗಿ ಪಾಲಿಸಿದ್ದೇವೆ. ಆದರೆ ರಾಮಕೃಷ್ಣ ಉಪೇಕ್ಷಿಸಿದ್ದಾನೆ' ಎಂದು ಚಾಡಿ ಹೇಳಿ ತೆರಳಿದರು.

ಮರುದಿನ ಆಸ್ಥಾನದಲ್ಲಿದ್ದ ತೆನಾಲಿರಾಮನನ್ನು ಕಂಡು ಶ್ರೀಕೃಷ್ಣದೇವರಾಯರು 'ರಾಮಕೃಷ್ಣಾ, ನಿನ್ನೆ ನಾನು ನೀಡಿದ ಆಜ್ಞೆಯಂತೆ ವಿಚಾರಿಸಿದೆಯಾ?' ಎಂದರು.

ತೆನಾಲಿರಾಮ ವಿನಯದಿಂದ 'ಹೌದು ಮಹಾಪ್ರಭು, ನಿನ್ನೆ ನಿಮ್ಮ ಆದೇಶದಂತೆ ನಾನು ಹೋಗಿ ವಿಚಾರಿಸಿದೆ. ಅವರು ಗೋದಾವರಿ ತೀರದ ರೈತರು. ತಮ್ಮ ಅಕ್ಕಿಯನ್ನು ಮರಾಠದೇಶಕ್ಕೆ ಮಾರಾಟ ಮಾಡುವುದಕ್ಕೆ ತೆರಳುತ್ತಿದ್ದರು. ಅಕ್ಕಿಯು ಉತ್ತಮ ಗುಣಮಟ್ಟದ್ದು ಎಂದು ಗೊತ್ತಾಗಿ ನಮ್ಮ ಉಗ್ರಾಣಾಧಿಕಾರಿಯಲ್ಲಿ ವಿಚಾರಿಸಿದೆ. ಬರದ ನಿರೀಕ್ಷೆಯಲ್ಲಿ ಉಗ್ರಾಣ ತುಂಬಿಸಬೇಕಿದ್ದರಿಂದ ಉತ್ತಮ ಬೆಲೆಗೆ ಆ ಅಕ್ಕಿಯೆಲ್ಲವನ್ನೂ ನಾವೇ ಖರೀದಿಸಿದೆವು. ಆ ರೈತರೂ ದೂರದ ಪಯಣ ತಪ್ಪಿದಕ್ಕೆ ಸಂತೋಷಗೊಂಡರು. ಇದೆಲ್ಲವೂ ಮುಗಿದಾಗ ರಾತ್ರಿಯಾಗಿದ್ದರಿಂದ ತಮಗೆ ಭಂಗ ಮಾಡದೆ ಈಗ ವರದಿ ಮಾಡುತ್ತಿದ್ದೇನೆ' ಎಂದು ಹೇಳಿದ.

ಚಕ್ರವರ್ತಿಯವರು ಆನಂದದಿಂದ 'ಶಹಬ್ಬಾಸ್, ರಾಮಕೃಷ್ಣ! ಒಳ್ಳೆಯ ಕೆಲಸ ಮಾಡಿದೆ' ಎಂದು ರಾಮಕೃಷ್ಣನನ್ನು ಹೊಗಳಿ 'ನೋಡಿದ್ರಾ ಅಷ್ಟದಿಗ್ಗಜರೇ, ವಿವೇಕವೆಂದರೆ ರಾಜನ ಸೂಚ್ಯ ಆಜ್ಞೆಯ ಇಂಗಿತವನ್ನರಿತು ಸೂಕ್ತವಾಗಿ ಕಾರ್ಯಗಳನ್ನು ಸಂಪನ್ನಗೊಳಿಸುವುದೇ ಹೊರತು ಕೇವಲ ರಾಜ ಹೇಳಿದ್ದನ್ನಷ್ಟೇ ಮಾಡುವುದಲ್ಲ. ಈಗ ನಿಮಗೆ ತಿಳಿಯಿತಲ್ಲ, ಯಾರು ವಿವೇಕಿಯೆಂದು..!' ಎಂದರು.

ಅಷ್ಟದಿಗ್ಗಜರಲ್ಲಿ ಉಳಿದವರು ಅವಮಾನದಿಂದ ತಲೆತಗ್ಗಿಸಿದ್ದರು. ಆಸ್ಥಾನದವರು ರಾಮಕೃಷ್ಣನ ವಿವೇಕಕ್ಕೆ ತಲೆತೂಗಿದರು.

■ **ರಮೇಶ್ ಶೆಟ್ಟಿಗಾರ್**

# ಎಲ್ಲಡಗಿಹನು?

ಹೂವಿಗೆ ಬಣ್ಣದ
ಬಟ್ಟೆಯ ತೊಡಿಸಿ
ಮುಖದಲಿ ಚೆಂದದ
ನಗುವನು ಮೂಡಿಸಿ
ಎಲ್ಲಡಗಿಹನೀ ಕಲೆಗಾರ

ಬಾನಿಗೆ ನೀಲಿಯ
ರಂಗನು ಬಳಿಸಿ
ಭೂಮಿಯ ಮೈಗೆ
ಹಸಿರನು ಉಡಿಸಿ
ಎಲ್ಲಡಗಿಹನೀ ಕಲೆಗಾರ

ಮಾಗಿದ ಹಣ್ಣಿಗೆ
ಸಿಹಿಯನು ಬೆರೆಸಿ
ಕೋಗಿಲೆ ಕಂಠಕೆ
ಇಂಪನು ಇರಿಸಿ
ಎಲ್ಲಡಗಿಹನೀ ಕಲೆಗಾರ

ಹಗಲಲಿ ಸೂರ್ಯನ
ಜಗದಲಿ ಕರೆಯಿಸಿ
ಇರುಳಲಿ ಚಂದ್ರನ
ಜಗುಲಿಗೆ ಕೂರಿಸಿ
ಎಲ್ಲಡಗಿಹನೀ ಕಲೆಗಾರ

ನೆಲದ ಬೊಂಬೆಗೆ
ಉಸಿರನು ತುಂಬಿಸಿ
ಬದುಕಿನ ಆಟವ
ಚತುರದಿ ಆಡಿಸಿ
ಎಲ್ಲಡಗಿಹನೀ ಕಲೆಗಾರ

■ **ಅರುಣಾ ನರೇಂದ್ರ, ಕೊಪ್ಪಳ**

